ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/38435/2017-18 ದಿನಾಂಕ : 13 JUN 2018

## ಸುತ್ತೋಲೆ

ವಿಷಯ: ವಿದ್ಯುತ್ ಉಪಸ್ಥಾವರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರುಗಳ ಕನಿಷ್ಠ ವೇತನವನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ), ಸಾರ್ವಜನಿಕ ಉದ್ದಿಮೆಗಳ ಇಲಾಖೆ ರವರ ಪತ್ರ ಸಂಖ್ಯೆ: ಡಿ.ಪಿ.ಇ 7 ಎಆರ್‌ಯು 2018 ದಿನಾಂಕ: 01.02.2018.
2. ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರ ಸುತ್ತೋಲೆ ಸಂಖ್ಯೆ: ಕಾಇ 51 ಎಲ್‌ಡಬ್ಲ್ಯೂಎ 2017 ದಿನಾಂಕ: 29.12.2017.
3. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಐಆರ್‌ಓ/ಬಿ14/6014/2002-03 ದಿನಾಂಕ: 25.09.2017

********

ಸಾರ್ವಜನಿಕ ಉದ್ದಿಮೆ ಇಲಾಖೆಯವರು ದಿನಾಂಕ: 01.02.2018ರ ಪತ್ರದಲ್ಲಿ ಕಾರ್ಮಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಇ 51 ಎಲ್‌ಡಬ್ಲ್ಯೂಎ 2017 ದಿನಾಂಕ: 29.12.2017 ನ್ನು ಲಗತ್ತಿಸಿ, ಹೊರಗುತ್ತಿಗೆ ಆಧಾರದಲ್ಲಿ ಗೊತ್ತುಪಡಿಸಿಕೊಂಡ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡುವ ಕುರಿತು ಸೂಚಿಸಿರುವ ಅಂಶಗಳನ್ನು ಅನುಸರಿಸಿ ಅಗತ್ಯ ಕ್ರಮಕ್ಕೈಗೊಳ್ಳುವಂತೆ ತಿಳಿಸಿರುತ್ತಾರೆ.

ಕವಿಪ್ರನಿನಿ ವ್ಯಾಪ್ತಿಯಲ್ಲಿ ಬರುವ ವಿವಿಧ ವಿದ್ಯುತ್ ಕೇಂದ್ರ/ಉಪಕೇಂದ್ರಗಳ ನಿರ್ವಹಣೆಗಾಗಿ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆಗೊಳಪಡಿಸಿ ಹೊರಗಿನ ಏಜೆನ್ಸಿಗಳಿಗೆ ವಹಿಸಲಾಗುತ್ತಿದ್ದು, ಇಂತಹ ಉಪಕೇಂದ್ರಗಳಲ್ಲಿ ಹೊರಗಿನ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರಿಗೆ ಕಾರ್ಮಿಕ ಇಲಾಖೆಯವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 29.12.2017 ರಲ್ಲಿ ತಿಳಿಸಿರುವ ಯಾವುದೇ ಶೆಡ್ಯೂಲ್ ಅನ್ವಯಿಸದೇ ಇರುವುದರಿಂದ ಶೆಡ್ಯೂಲ್-30 "ಅನುಸೂಚಿತ ಪಟ್ಟಿಗೆ ಸೇರದ ಉದ್ಯೋಗಿಗಳು" (Employment not covered in any of the Scheduled Employments) ರಡಿಯಲ್ಲಿ ಕನಿಷ್ಠ ವೇತನವನ್ನು ಪರಿಗಣಿಸಲಾಗಿದ್ದು, ಈ ಕೆಳಗೆ ತಿಳಿಸಿರುವ ಕನಿಷ್ಠ ವೇತನವನ್ನು ಟೆಂಡರ್ ಪ್ರಕ್ರಿಯೆಗೊಳಪಡಿಸುವಾಗ ಪರಿಗಣಿಸುವಂತೆ ಹಾಗೂ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ಸಹ, ಅಂತಹ ಕೆಲಸಗಾರರಿಗೂ ದಿನಾಂಕ: 01.04.2018 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ಮಾಸಿಕ ಕನಿಷ್ಠ ವೇತನವನ್ನು ಪಾವತಿಸುವಂತೆ ತಿಳಿಸಲಾಗಿದೆ.

| ಕ್ರ.ಸಂ | ಹುದ್ದೆ | ಹಾಲಿ ಕನಿಷ್ಠ ವೇತನ | ಪರಿಷ್ಕೃತ ಕನಿಷ್ಠ ವೇತನ |
|---|---|---|---|
| 1 | ಪಾಳಿ ಇಂಜಿನಿಯರ್ ದರ್ಜೆ-1 | ರೂ.16,000/- | ರೂ.16,106/- |
| 2 | ಪಾಳಿ ಇಂಜಿನಿಯರ್ ದರ್ಜೆ-2/ ಪಾಳಿ ಆಪರೇಟರ್ | ರೂ.12,000/- | ರೂ.14,704/- |
| 3 | ಪಾಳಿ/ನಿರ್ವಹಣಾ ಸಹಾಯಕ | ರೂ.8,000/- | ರೂ.13,429/- |

ಮುಂದುವರೆದು ಕಾರ್ಮಿಕ ಇಲಾಖೆಯವರು ಮೇಲೆ ತಿಳಿಸಲಾದ ಶೆಡ್ಯೂಲ್‌ನಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವ ಕನಿಷ್ಠ ವೇತನವನ್ನು ಮುಂದಿನ ಆದೇಶದವರೆಗೂ ಪರಿಗಣಿಸುವಂತೆ ತಿಳಿಸಲಾಗಿದೆ.

(ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ
ರವರಿಂದ ಅನುಮೋದಿಸಲ್ಪಟಿದೆ)

ತಮ್ಮ ವಿಶ್ವಾಸಿ,

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ

ಪ್ರತಿಯನ್ನು ಮಾಹಿತಿಗಾಗಿ:

1. ಎಲ್ಲಾ ಮುಖ್ಯ ಇಂಜನಿಯರ್, ಕವಿಪ್ರನಿನಿ, ಪ್ರಸರಣ ವಲಯ.
2. ಆರ್ಥಿಕ ಸಲಹೆಗಾರರು (ಲೆಕ್ಕ ಮತ್ತು ಸಂಪನ್ಮೂಲ)/(ಆಂತರಿಕ ತನಿಖೆ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
3. ಉಪ ಪ್ರಧನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ)/ ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.com-->eprasarna** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

5. ಎಲ್ಲಾ ಅಧೀಕ್ಷಕ ಇಂಜನಿಯರ್/ನಿಯಂತ್ರಣಾಧಿಕಾರಿ, ಪ್ರಸರಣ(ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
6. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.
7. ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ.
8. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳನ್ನು ಮಾಹಿತಿಗಾಗಿ.

9. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(659) ಹಾಗೂ ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
10. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
11. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
12. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರುಗಳ ಸಂಘ, ಬೆಂಗಳೂರು.
13. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
14. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
15. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜನಿಯರುಗಳ ಸಂಘ, ಬೆಂಗಳೂರು.
16. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳ ಪಂಗಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಸಂಘ, ಬೆಂಗಳೂರು.